# ಸಮಾಸಗಳು

ಎರಡು ಅಥವಾ ಅನೇಕ ಪದಗಳನ್ನು ಅರ್ಥಕ್ಕನುಸಾರವಾಗಿ ಸೇರಿಸಿ ಒಂದೇ ಪದವನ್ನಾಗಿ ಮಾಡುವ ಪ್ರಕ್ರಿಯೆಯನ್ನು ಸಮಾಸ ಎನ್ನುತ್ತಾರೆ.

ಮೊದಲ ಪದ–ಪೂರ್ವಪದ ಎರಡನೆಯ ಪದ–ಉತ್ತರಪದ

## ಸಮಾಸದ ವಿಧಗಳು

1) ತತ್ಪುರುಷ ಸಮಾಸ : – ಪೂರ್ವಪದ – ನಾಮಪದ , ಉತ್ತರಪದ –ನಾಮಪದ

2) ಕರ್ಮಧಾರೆಯ ಸಮಾಸ :– ಪೂರ್ವಪದ –ಗುಣವಾಚಕ , ಉತ್ತರಪದ –ನಾಮಪದ

3) ದ್ವಿಗು ಸಮಾಸ :– ಪೂರ್ವಪದ – ಸಂಖ್ಯಾವಾಚಕ , ಉತ್ತರಪದ –ನಾಮಪದ

4) ಅಂಶಿ ಸಮಾಸ :– ಅಂಶ ,ಅಂಶಿ

5) ದ್ವಂದ್ವ ಸಮಾಸ :– ಎಲ್ಲಾ ಪದಗಳ ಅರ್ಥ ಪ್ರಧಾನ

6) ಕ್ರಿಯಾ ಸಮಾಸ :– ಪೂರ್ವಪದ – ನಾಮಪದ , ಉತ್ತರಪದ –ಕ್ರಿಯಾಪದ

7) ಬಹುವ್ರೀಹಿ ಸಮಾಸ :– ಅನ್ಯಪದ ಪ್ರಧಾನ

8) ಗಮಕ ಸಮಾಸ :– ಪೂರ್ವಪದ – ಸರ್ವನಾಮ ಅಥವಾ ಕೃದಂತ ,ಉತ್ತರಪದ –ನಾಮಪದ

---

### 1) ತತ್ಪುರುಷ ಸಮಾಸ :–

ಪೂರ್ವಪದ – ನಾಮಪದ , ಉತ್ತರಪದ –ನಾಮಪದ ,ಉತ್ತರ ಪದ ಅರ್ಥ ಪ್ರಧಾನ

**ನಾಮಪದ** :– ಯಾವುದೇ ಒಬ್ಬ ವ್ಯಕ್ತಿ,ಒಂದು ಸ್ಥಳ,ಒಂದು ವಸ್ತು,ಪ್ರಾಣಿ ಇತ್ಯಾದಿ ಹೆಸರುಗಳು.

**ಉದಾಹರಣೆ** : ರಾಮು, ಮನೆ, ಮರ,ಬೆಟ್ಟ,ತಾವರೆ,ದೈವ

| | | | |
|---|---|---|---|
| • ಬೆಟ್ಟದಾವರೆ | • ಧನಹರಣ | • ಹೂದೋಟ | • ದೈವಭಕ್ತಿ |
| • ತಲೆನೋವು | • ಪರಧನ | • ಸ್ವಾಮಿದ್ರೋಹ | • ಕಾಲುಬಳೆ |

| | | | | |
|---|---|---|---|---|
| ಬೆಟ್ಟದ + ತಾವರೆ | | ತಲೆಯಲ್ಲಿ + ನೋವು |
| ಧನದ + ಹರಣ | | ಪರರ + ಧನ |
| ಪೂವಿನ + ತೋಟ | | ಸ್ವಾಮಿಗೆ + ದ್ರೋಹ |
| ದೈವದ + ಭಕ್ತಿ | | ಕಾಲಿನ + ಬಳೆ |

## 2) ಕರ್ಮಧಾರೆಯ ಸಮಾಸ :–

**ಪೂರ್ವಪದ –ಗುಣವಾಚಕ , ಉತ್ತರಪದ –ನಾಮಪದ**

**ಗುಣವಾಚಕ :–**ವಸ್ತುಗಳ ಗುಣ,ಸ್ವಭಾವ ರೀತಿಗಳನ್ನು ತಿಳಿಸುವ ಪದಗಳು.

**ಉದಾಹರಣೆ** : ಕೆಂಪು,ದೊಡ್ಡ, ಹಿರಿದು

| | | | |
|---|---|---|---|
| • ಹೆಮ್ಮರ | • ಹೊಸಗನ್ನಡ | • ಪೆರ್ಮಗ | • ನಲ್ಗುದುರೆ |
| • ಇಮ್ಮಾವು | • ಅತಿಕುಟಿಲ | • ಪೆರ್ಮರ | • ಕಟ್ಟೇಕಾಂತ |
| • ಮೆಲ್ಪಾತು | • ಹೆದ್ದೊರೆ | | |

| | | | |
|---|---|---|---|
| ಹಿರಿದು + ಮರ | | ಕಡಿದು + ಏಕಾಂತ |
| ಇರಿದು + ಮಾವು | | ಪಿರಿಯ + ಮಗ |
| ಮೆಲುವಾದ + ಮಾತು | | ನಲ್ಲಿತು + ಕುದುರೆ |
| ಹೊಸತು + ಕನ್ನಡ | | ಪಿರಿದು + ಮರ |
| ಅತಿಯಾದ + ಕುಟಿಲ | | ಹಿರಿದು + ತೊರೆ |

## 3) ದ್ವಿಗು ಸಮಾಸ :-

**ಪೂರ್ವಪದ - ಸಂಖ್ಯಾವಾಚಕ , ಉತ್ತರಪದ -ನಾಮಪದ**

**ಸಂಖ್ಯಾವಾಚಕ :-** ಸಂಖ್ಯೆಯನ್ನು ಹೇಳುವ ಪದಗಳು

**ಉದಾಹರಣೆ** : ಒಂದು,ಎರಡು,ಮೂರು, ಷಟ್(ಷಣ್) ,ಸಪ್ತ

| | | | |
|---|---|---|---|
| • ಮೂಗಾವುದ | • ಸಪ್ತಸ್ವರಗಳು | • ಎಣ್ದೆಸೆ | • ಷಟ್ಕೋನ |
| • ಮಕ್ಕಣ್ಣು | • ಏಕಾಕ್ಷ | • ಒಗ್ಗಟ್ಟು | • ನಾಕಾಳು |

ಮೂರು +ಗಾವುದು ಏಕ + ಅಕ್ಷ ಷಟ್ + ಕೋನ

ಮೂರು +ಕಣ್ಣು ಎಂಟು + ದೆಸೆ ನಾಕು +ಆಳು

ಸಪ್ತಗಳಾದ +ಸ್ವರಗಳು ಒಂದು + ಕಟ್ಟು

## 4) ಅಂಶಿ ಸಮಾಸ :-

**ಪೂರ್ವಪದ ಅಂಶ , ಉತ್ತರಪದ ಅಂಶಿ**

**ಅಂಶ:-** ಒಂದು ಭಾಗ

ಉದಾಹರಣೆ : ಕಾಲು.ತಲೆ

**ಅಂಶಿ:-** ಒಂದು ಭಾಗದಲ್ಲಿ ಮತ್ತೊಂದು ಭಾಗ

**ಉದಾಹರಣೆ** : ಹಿಂಗಾಲು.ಮುಂಗಾಲು

ಹಿಂದಲೆ,ಮುಂದಲೆ

| | | | |
|---|---|---|---|
| • ಹಿಂಗಾಲು | • ಅಂಗೈ | • ಮುಂದಲೆ | • ಹಿಂದಲೆ |
| • ಮುಂಗಾಲು | • ಮುಂಗೈ | • ನಡುರಾತ್ರಿ | • ನಟ್ಟಡವಿ |
| • ಕಡೆಹಣ್ಣು | • ತುದಿಬೆರಳು | • ಕೆಳದುಟಿ | • ತುದಿಮೂಗು |

| | | |
|---|---|---|
| ಕಾಲಿನ + ಹಿಂದೆ | ಕೈ + ಮುಂದೆ | ರಾತ್ರಿಯ + ನಡು |
| ಕಾಲಿನ + ಮಂದೆ | ತಲೆಯ + ಮುಂದೆ | ಕೈಯ + ಅಡಿ |
| ತಲೆಯ + ಹಿಂದೆ | ಅಡವಿಯ + ನಡು | ಬೆರಳಿನ + ತುದಿ |
| ಕಣ್ಣ+ಕಡೆ | ತುಟಿಯ + ಕೆಳಗೆ | ಮೂಗಿನ + ತುದಿ |

---

## 5) ದ್ವಂದ್ವ ಸಮಾಸ

ಎರಡು ಅಥವಾ ಎರಡಕ್ಕಿಂತ ಹೆಚ್ಚು ನಾಮ ಪದಗಳಿದ್ದು , ಎಲ್ಲಾ ಪದಗಳ ಅರ್ಥ ಪ್ರಧಾನ

| | | | |
|---|---|---|---|
| ಗಿರಿವನದುರ್ಗಗಳು | ಮಾದ್ರಮಾಗಧಯಾದವರು | ಹನುಮಭೀಮರಾಮರು | ಭೀಮಾರ್ಜುನರು |
| ಕರಿತುರಗರಥಗಳು | ಸೂರ್ಯಚಂದ್ರರು | ಕೆರೆಕಟ್ಟೆಬಾವಿಗಳು | ಲವಕುಶರು |
| ರಾಮಲಕ್ಷ್ಮಣರು | | | |

ಗಿರಿಯೂ+ವನವೂ+ದುರ್ಗವೂ

ಮಾದ್ರರೂ + ಮಾಗದರೂ +ಯಾದವರು

ಕರಿಯೂ+ತುರಗವೂ+ರಥವೂ

ಸೂರ್ಯನೂ +ಚಂದ್ರನೂ

ಹನುಮನೂ +ಭೀಮನೂ +ರಾಮನೂ

ಕೆರೆಯೂ +ಕಟ್ಟೆಯೂ +ಬಾವಿಯೂ

ಭೀಮನೂ +ಅರ್ಜುನನೂ

---

## 6) ಕ್ರಿಯಾ ಸಮಾಸ :–

ಪೂರ್ವಪದ – ನಾಮಪದ ಉತ್ತರಪದ –ಕ್ರಿಯಾಪದ

ಕ್ರಿಯಾಪದ :–ಭಾಷೆಯಲ್ಲಿ ಕ್ರಿಯೆಯನ್ನು (ಕಾರ್ಯ) ತಿಳಿಸುವ ಪದಗಳು

ಉದಾಹರಣೆ :– ತೆರೆ,ಮುಚ್ಚು,ಏರಿಸು,ಕೇಳಿ ಬರೆಯುತ್ತಾನೆ,ನೋಡುತ್ತಾನೆ.

| | | | |
|---|---|---|---|
| • ಮೈಮುಚ್ಚು | • ಕೈಕೊಳ್ಳುದು | • ಕೈಯಾನು | • ಬಿಲ್ಗೊಂಡು |
| • ಕಣ್ದೆರೆ | • ಕಂಗೆಡು | • ಹೊಗೆದೋರು | • ಸೂಲ್ಗೇಳಿ |
| • ಬಲವಂದು | • ಸಾಕ್ಷಿಮಾಡಿ | • ಬಿಲ್ದಿರುವನೇರಿಸಿ | • ಮೋಸಮಾಡು |

| | | |
|---|---|---|
| ಮೈಯನ್ನು+ಮುಚ್ಚು | ಕೈಯನ್ನು + ಕೊಳ್ವುದು | ಕೈಯನ್ನು + ಆನು |
| ಕಣ್ಣನ್ನು+ತೆರೆ | ಸಾಕ್ಷಿಯನ್ನು + ಮಾಡಿ | ಹೊಗೆಯನ್ನು + ತೋರು |
| ಕಣ್ಣಿನಿಂದ +ಕೆಡು | ಬಲಕ್ಕೆ + ಬಂದು | ಸೊಲ್ಲನ್ನು + ಕೇಳಿ |
| ಬಿಲ್ಲನ್ನು + ಕೊಂಡು | ಬಿಲ್ದಿರುವನ್ನು +ಏರಿಸಿ | ಮೋಸವನ್ನು +ಮಾಡು |

---

## 7) ಬಹುವ್ರೀಹಿ ಸಮಾಸ

ಎರಡು ಅಥವಾ ಎರಡಕ್ಕಿಂತ ಹೆಚ್ಚು ನಾಮ ಪದಗಳು ಸೇರಿ ಸಮಾಸವಾದಾಗ , ಅನ್ಯಪದ ಪ್ರಧಾನ

| | | | |
|---|---|---|---|
| • ಹಣೆಗಣ್ಣ | • ಘಟಸಂಭೂತ | • ದನುಜರಿಪು | • ಮದಾಂಧ |
| • ಮುಕ್ಕಣ್ಣ | • ಪವನನಂದನ | • ಮುರಾರಿ | |
| • ಚಕ್ರಪಾಣಿ | • ಗಾಂಡಿವಿ | • ಮೇದಿನೀಪತಿ | |
| • ಅಬ್ಜೋದರ | • ಇನತನೂಜ | • ರಾಜೀವಸಖ | |

ಹಣೆಯಲ್ಲಿ ಕಣ್ಣು ಉಳ್ಳವನು ಆವನೋ ಅವನು –ಹಣೆಗಣ್ಣ–ಶಿವ

ಮೂರು ಕಣ್ಣು ಉಳ್ಳವನು ಆವನೋ ಅವನು ಮುಕ್ಕಣ್ಣ–ಶಿವ

ಚಕ್ರವು ಪಾಣಿಯಲ್ಲಿ ಆವನಿಗೋ ಅವನು ಚಕ್ರಪಾಣಿ–ವಿಷ್ಣು

ಉದರದಲ್ಲಿ ಕಮಲ ಉಳ್ಳವ ಅಬ್ಜೋದರ –ವಿಷ್ಣು

ಘಟದಲ್ಲಿ ಸಂಭೂತನಾದವನು ಆವನೋ ಅವನು ಘಟಸಂಭೂತ –ದ್ರೋಣ

ಗಾಂಡಿವವನ್ನು ಪಡೆದವನು ಆವನೋ ಅವನು ಗಾಂಡಿವಿ –ಅರ್ಜುನ

ಪವನನ ನಂದನ ಆವನೋ ಅವನು ಪವನನಂದನ – ಭೀಮ

ಇನನ ತನುಜ ಆವನೋ ಅವನು ಇನತನೂಜ –ಕರ್ಣ

ಧನಜರಿಗೆ ರಿಪು ಆವನೋ ಅವನು ದನುಜರಿಪು –ಕೃಷ್ಣ

ಮುರನ ಅರಿ ಆವನೋ ಅವನು ಮುರಾರಿ –ಕೃಷ್ಣ

ಮೇದಿನಿಗೆ ಪತಿ ಆವನೋ ಅವನು ಮೇದಿನೀಪತಿ –ರಾಜ

ರಾಜಿವನ ಸಖ ಆವನೋ ಅವನು ರಾಜೀವಸಖ –ಸೂರ್ಯ

ಮದದಿಂದ ಅಂದನು ಆವನೋ ಅವನು ಮದಾಂಧ

-------------------------------------------------------------------

## 8) ಗಮಕ ಸಮಾಸ :-

ಪೂರ್ವಪದ – ಸರ್ವನಾಮ ಅಥವಾ ಕೃದಂತ ಉತ್ತರಪದ –ನಾಮಪದ

| ಆಕಲ್ಲು | ಈಬೆಕ್ಕು | ನೆಯ್ದುವಸ್ತ್ರ | ಆ ಹುಡುಗ |
|---|---|---|---|
| | | | |

ಅದು+ ಕಲ್ಲು ಇದು+ಬೆಕ್ಕು ನೆಯ್ದುದು +ವಸ್ತ್ರ ಆ + ಹುಡುಗ

### ಮಾದರಿ ಪ್ರಶ್ನೆಗಳು

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

೧) ದ್ವಂದ್ವ ಸಮಾಸದ ಪದವಿದು :

(ಎ) ಮೋಸಮಾಡು (ಬಿ) ನಡುರಾತ್ರಿ (ಸಿ) ಸೂರ್ಯಚಂದ್ರರು (ಡಿ) ಪೆರ್ಮರ

---

೨) ಕರ್ಮಧಾರೆಯ ಸಮಾಸದ ಪದವಿದು :

(ಎ) ಮೋಸಮಾಡು (ಬಿ) ನಡುರಾತ್ರಿ (ಸಿ) ಸೂರ್ಯಚಂದ್ರರು (ಡಿ) ಪೆರ್ಮರ

---

೩) 'ಮೆಲ್ವಾತು' ಪದದಲ್ಲಿ ಏರ್ಪಟ್ಟ ಸಮಾಸವಿದು :

(ಎ) ಅಂಶಿ (ಬಿ) ಕರ್ಮಧಾರೆಯ (ಸಿ) ಕ್ರಿಯಾ (ಡಿ) ಗಮಕ ಸಮಾಸ

---